doc-611
T-P-2

Reg No B G 155

23 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸ

ಆಂಧ್ರದ ವಿಭಜನೆ ಆಗುವುದು ಖಂಡಿತ ?

ಇಂದಿರಾರವರ ಮುಂದೆ ಭಾರಿ ರ್ಯಾಲಿ

ಮದರಾಸು— ಡಿಎಂಕೆ ಮಂತ್ರಿಮಂಡಲ ವಿರುದ್ಧ ಜನತೆಯ ಅಸಮಾಧಾನ ಪ್ರದರ್ಶಿಸಲು, ಪ್ರಧಾನಿ ಇಂದಿರಾ ಗಾಂಧಿಯವರು ಜನವರಿ ಪ್ರಾರಂಭದಲ್ಲಿ ಇಲ್ಲಿಗೆ ಬಂದಾಗ ಭಾರಿ ಸಾರ್ವಜನಿಕ ರ್ಯಾಲಿ ಏರ್ಪಡಿಸಲು ಅಣ್ಣಾಡಿಎಂಕೆ ನಾಯಕ ಶ್ರೀ ರಾಮಚಂದ್ರ ಯೋಜಿಸಿರುವರು.

★

ತನ್ನ ಮನೆಗೆ ಬಾಡಿಗೆ ಭತ್ಯೆ

ತಿರುವೇಂದ್ರಂ— ಒಬ್ಬರು ಮಂತ್ರಿಗಳು ತಮ್ಮ ಮನೆಯಲ್ಲೇ ವಾಸಮಾಡಿಕೊಂಡಿದ್ದು, ರೂಲ್ಸಿಗಿಂತ ಹೆಚ್ಚು ಬಾಡಿಗೆ ಅಲೊಯನ್ಸ್ ತೆಗೆದುಕೊಳ್ಳುತ್ತಿರುವರೆಂದು ಇ. ಎಸ್. ಎಸ್ ಸಂಬೂದಾಸ್ ಸಾದರು ಶಾಸನಸಭೆಯಲ್ಲಿ ಆಪಾದಿಸಿದರು ಮಂತ್ರಿಗಳು ಹೇಳುವುದು, ಆವು ತನ್ನ ಹೆಂಡತಿಯರ ಮನೆ ಎಂದು.

★

ಮುಲ್ಕಿ ರೂಲ್ಸ್

ನವದೆಹಲಿ— ವಿವಾದಸ್ಪದ ಆಂಧ್ರದ ಮುಲ್ಕಿ ರೂಲ್ಸ್ ಮಸೂದೆಯು ಲೋಕಸಭೆಯಲ್ಲಿ 233-40 ಓಟುಗಳಿಂದ ಮಂಜೂರಾಯಿತು – ಚರ್ಚೆಗೆ ಉತ್ತರ ಕೊಡುತ್ತಾ ಪ್ರಧಾನಿ ಇಂದಿರಾರವರು, ರಾಜ್ಯದ ವಿಭಜನೆ ಸಾಧ್ಯವಿಲ್ಲವೆಂದರು.

●

ಪ್ರತ್ಯೇಕ ಆಂಧ್ರ

ಹೈದರಾಬಾದು— ಪ್ರತ್ಯೇಕ ಆಂಧ್ರದ ಚಳುವಳಿಯಲ್ಲಿ 6 ವರ್ಷದಿಂದ 80 ವರ್ಷದ ಜನರು ಸೇರಿರುವದರಿಂದ, ಭೂಮಿಯ ಮೇಲಿನ ಯಾವ ಶಕ್ತಿಯಿಂದಲು ರಾಜ್ಯದ ವಿಭಜನೆ ನಿಲ್ಲಿಸಲು ಸಾಧ್ಯವಿಲ್ಲವೆಂದು ಆಂಧ್ರ ವ್ಯವಸಾಯ ಮಂತ್ರಿ ಶ್ರೀ ಕಾಕಿ ನಿ ವೆಂಕಟರತ್ನಂ ಹೇಳಿದರು

ಸಹಸ್ರಾರು ಜನರಿಗೆ ಉದ್ಯೋಗ

ಬೆಂಗಳೂರು—ರಾಕ್ಷಸಾಕಾರದ ಕಾಳಿ ನದಿ ವಿದ್ಯುತ್ ಪ್ರಾಜೆಕ್ಟಿನ ಕೆಲಸಕ್ಕೆ ಸರಕಾರವು ಅಭಾವ ಪೀಡಿತ ಪ್ರದೇಶಗಳಿಂದ 10000 ಜನರಿಗೆ ಉದ್ಯೋಗ ದೊರಕಿಸ್ಪವುದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು – ವರಾಹಿ ಮತ್ತು ಬೆಡ್ತಿ ಪ್ರಾಜೆಕ್ಟುಗಳಲ್ಲೂ ಹೀಗೆ ಮಾಡಲಾಗುವುದೆಂದೂ ತಿಳಿಸಲಾಯಿತು.

★

ಹೆಸುಗಳು ಹೆಚ್ಚು ಹಾಲು ಕೊಡಲು

ಫೆಡರಾಲ್ ರಿಪಬ್ಲಿಕ್ ಜರ್ಮನಿಯ ಫ್ರೀಬರ್ಗ್‌ನ ಪ್ರಾಣಿ ಆರೋಗ್ಯ ವಿಭಾಗದಲ್ಲಿ ನಡೆಸಿದ ಪರಿಶೋಧನಗಳ ಫಲವಾಗಿ ಹಸುಗಳು ಪ್ರಶಾಂತವಾದ ಸನ್ನಿವೇಶದಲ್ಲಿದ್ದು ಸುಖವಾದ ವಾತಾವರಣವನ್ನು ಕಲ್ಪಿಸಿದಲ್ಲಿ ಅದು ಹಾಲು ಕೊಡುವ ಪ್ರಮಾಣ ಹೆಚ್ಚಾಗಿರುವದೆಂದು ಕಂಡುಹಿಡಿದಿದ್ದಾರೆ.
(ಯು ಪಿ ಎಸ್)

★

ಪಾಲ್ಕಿವಾಲಾರ ವಾದ

ನವದೆಹಲಿ— ಸುಪ್ರೀಂ ಕೋರ್ಟಿನಲ್ಲಿ ಮೂಲಭೂತ ಹಕ್ಕು ಸಂಬಂಧದ ಅರ್ಜಿಗಳ ಬಗ್ಗೆ ಶ್ರೀ ಪಾಲ್ಕಿವಾಲಾರು ತಮ್ಮ ವಾದವನ್ನು ಶುಕ್ರವಾರ ಮುಗಿಸಿದರು – 22 ವರ್ಷಗಳ ಈ ಕೋರ್ಟ್ ಲ್ಲಿ 30 ದಿನಗಳ ದೀರ್ಘಾವಧಿ ವಾದವು ಇಲ್ಲೀವರೆಗೆ ನಡೆದಿಲ್ಲ – ಕ್ರಿಸ್ಮಸ್ ರಜಾನಂತರ ಜನವರಿ 8 ರಿಂದ ಎದುರುವಾದವನ್ನು ಕೋರ್ಟು ಕೇಳುವುದು – ಈ ಬ ಉದ್ದದ ಮೊಖದ್ದಮೆಯು ಫೆಬ್ರವರಿ ಕಡೆಯವರೆಗೆ ನಡೆಯುವಂತಿದೆ.

●

ವಾಷಿಂಗ್ಟನ್— ಅಮೆರಿಕಾವು ಪಾಕಿಸ್ತಾನಕ್ಕೆ ರಕ್ಷಣಾ ಖರ್ಚನ್ನು ಕಡಮೆ ಮಾಡಲು ಸೂಚಿಸಿದೆ

ನವೀನ ರೀತಿಯ ಪ್ರತಿಭಟನೆ

ಬೆಂಗಳೂರು— ತಮ್ಮ ಕೇಳಿಕೆಗಳ ಒತ್ತಾಯಕ್ಕಾಗಿ ಮೈಸೂರು ವಿಭಾಗದ ಸ್ಟೇಷನ್ ಮಾಸ್ಟರುಗಳ ನವೀನ ರೀತಿಯ ಪ್ರತಿಭಟನೆ ಕೈಗೊಳ್ಳಲು ಯೋಜಿಸಿರುವರು – ಡಿಸೆಂಬರು 23 ಮಧ್ಯರಾತ್ರಿಯಿಂದ 6 ಗಂಟೆ ಕಾಲ ಮತ್ತು 24 ರಂದು ಮಧ್ಯಾಹ್ನ 12 ರಿಂದ 6 ಗಂಟೆ ಕಾಲ ಆಡಳಿತದವರೊಡನೆ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳದೆ ಫೋನ್ ಕರೆಯನ್ನೂ ಲಕ್ಷಿಸದೆ ನಿತ್ಯದ ಕಾರ್ಯಗಳನ್ನು ಆತಂಕಗೊಳಿಸಲು ಯೋಜಿಸಿರುವರು.

★

ಯುದ್ಧ ಬೇಕೇನೋ

ಮಾಸ್ಕೋ— ರಷ್ಯಾದೊಡನೆ ಯುದ್ಧವಿಲ್ಲದ ಒಪ್ಪಂದಕ್ಕೆ ರುಜು ಮಾಡಲು ಚೀನಾ ತಿರಸ್ಕರಿಸಿದೆ.

★

ಡಾಕ್ಟರುಗಳ ಘೇರಾವೋ

ಶ್ರೀಕಾಳಹಸ್ತಿ— ಮುಲ್ಕಿ ವಿರುದ್ಧ ಚಳವಳಿಗಾರರು ಚಂಬೇಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾಕ್ಟರುಗಳು ಮುಷ್ಕರದಲ್ಲಿ-ಭಾಗವಹಿಸಲು ಒತ್ತಾಯಕ್ಕಾಗಿ ಅವರನ್ನು ಘೇರಾವೋ ಮಾಡಿದರು.

●

ಲಲಿತಕಲಾ ಮಹೋತ್ಸವ

ಮೈಸೂರು— ಪೌರಸಭೆಯವರು ಏರ್ಪಡಿಸಿದ್ದ ಲಲಿತಕಲಾ ಮಹೋತ್ಸವವು ನಿನ್ನೆ ಪರಿಸಮಾಪ್ತಿಗೊಂಡಿತು – ಉಪಾಧ್ಯಕ್ಷ ಶ್ರೀ ಅಸ್ವಾಜಪ್ಪನವರು ಬಹುಮಾನ ಯೋಗ ಮಾಡಿದರು

●

ವಿಜಯವಾಡ— ಕಾಂಗ್ರೆಸ್ ಪಕ್ಷ ವೀಕ್ಷಕರು ಬೀಗಹಾಕಿದ್ದ ಮಾಡಿದರು.

ಅಭಾವ ಪೀಡಿತರ ಅನುಕೂಲಕ್ಕೆ

ಬೆಂಗಳೂರು— ಅಭಾವಪೀಡಿತ ಬೀದರ್, ಬಿಜಾಪುರ, ಗುಲ್ಬರ್ಗಗಳಲ್ಲಿ ಕೂಡಲೆ ಮೂರು ಸಂಚಾರಿ ಆಸ್ಪತ್ರೆ ಏರ್ಪಡಿಸಲು ಮಂತ್ರಿಮಂಡಲದಲ್ಲಿ ನಿರ್ಧರಿಸಲಾಯಿತು– ಅಲ್ಲಿ ಭಾವಿ ತೋಡಿಕೊಳ್ಳಲು ಒಂದೊಂದು ಭಾವಿಗೆ ರೂ 1500 ಭೂ ಅ ಭಿ ವೃ ದ್ಧಿ ಬ್ಯಾಂಕು ಕೊಡುವಂತೆ ನಿರ್ಧರಿಸಲಾಯಿತು ಮೇವನ್ನು ಕಡಮೆ ಬೆಲೆಯಲ್ಲಿ ಕೊಡುವಂತೆ ನಿರ್ಧರಿಸಲಾಯಿತು.

★

ಆಸ್ತಿ ತೆರಿಗೆ ವಜಾ

ಚಂಡಿಗಢ— ಪ್ರಸ್ತುತ ಆರ್ಥಿಕ ವರ್ಷದಿಂದ ರಾಜ್ಯದಲ್ಲಿ ಆಸ್ತಿ ತೆರಿಗೆ ವಜಾ ಮಾಡಲು ಪಂಜಾಬು ಸರಕಾರ ನಿರ್ಧರಿಸಿದೆ

★

ಬಿಜಾಪುರದಿಂದ ಬೆಳಗಾಂ ಜಿಲ್ಲೆಗೆ

ಬೆಂಗಳೂರು— ಅಭಾವಪೀಡಿತ ಬಿಜಾಪುರದಿಂದ ಬೆಳಗಾಂ ಜಿಲ್ಲೆಯ ಕಿನವೆ ಮೇವಿನ ಕೇಂದ್ರಕ್ಕೆ ಪ್ರಥಮ ಂಡ 400 ಜಾನುವಾರುಗಳನ್ನು ತರಲಾಯಿತು.

★

ಭಾರತ ಉಪಗ್ರಹವಲ್ಲ

ನವದೆಕ — ಭಾರತವು ಕೆಲವು ವಿದೇಶೀ ಶಕ್ತಿಗಳ ಉಪಗ್ರಹವಾಗಿದೆ ಎಂಬ ಪ್ರಚಾರವನ್ನು ಪ್ರಧಾನಿ ಇಂದಿರಾರವರು ಅಲ್ಲಗಳೆದು, ಭಾರತವು ತನ್ನ ಯೋಜನೆ, ನಿರ್ಧಾರ, ತೀರ್ಮಾನಗಳಲ್ಲಿ ಸ್ವತಂತ್ರವಾಗಿಯೇ ಇರುವದೆಂದ ಕಳೆದ ಪಾರ್ಲಿಮೆಂಟರಿ ಪಾರ್ಟಿಯಲ್ಲಿ ಹೇಳಿದರು.

○

ಗುಂಟೂರು ಬಂದ್

ಗುಂಟೂರು— ಮುಲ್ಕಿ ರೂಲ್ಸ್ ಮಸೂದೆ ಪ್ರತಿಭಟಿಸಿ ನಿನ್ನೆ ಬಂದ್ ಆಚರಿಸಲಾಯಿತು.

ರೈತ ಮತ್ತು ಕಾರ್ಮಿಕ ಸೇವಾ ಸಂಘ,

ರೈತ ಮತ್ತು ಕಾರ್ಮಿಕ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ ಜಂಬೂ ಗೌಡರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದ ರೈತ ಮತ್ತು ಕಾರ್ಮಿಕ ಸೇವಾ ಸಂಘದ ಕಾರ್ಯಕಾರಿ ಸಮಿತಿ ಈ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿದೆ —

ಭಾರತದ ಆದ್ಯಂತ 18 ಸ್ಟಾಂಡರ್ಡ್ ಎಕರೆ ಜಮೀನು ಮಿತಿ ಇರಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ರಾಷ್ಟ್ರಕ್ಕೆ ಅಸೋಳ್ಳವಾದ ಸಲಹೆ ನೀಡಿರುವುದನ್ನು ಸ್ವಾಗತಿಸುತ್ತಾ, ಇದೇ ರೀತಿ ಮಿತಿ ಭಾರತದ ಆಡಳಿತದ ಸರ್ವ ಭಾಗಗಲ್ಲೂ ಅನ್ವಯಿಸಬೇಕೆಂದು, ಈ ಕ್ರಮವನ್ನು ಕೂಡಲೇ ಕೈಗೊಂಡು ಆಳಿನಿಂದ ಹಿಡಿದು ಸಣ್ಣ, ಮಧ್ಯಮ, ಹಿರಿಯ ಅಧಿಕಾರಿಗಳು ಹಾಗೂ ಪ್ರಧಾನಿ, ಮುಖ್ಯ ಮಂತ್ರಿಗಳು ಮತ್ತು ಮಂತ್ರಿಗಳಿಗೆ ಜಾರಿ ಮಾಡಿ, ಪ್ರತಿಯೊಬ್ಬರಿಗೂ ಜೀವನಕ್ಕೆ ಅಗತ್ಯವಾಗುವಂತೆ ಸಮಾಜವಾದದ ಗುರಿಯನ್ನು ಹೊಂದಿ ತಿಂಗಳಿಗೆ ರೂ. 500 ವೇತನ ನಿಗದಿ ಮಾಡಬೇಕೆಂದು, ಮೈಸೂರಿನಲ್ಲಿ ಮೊದಲು ಈ ಕ್ರಮವನ್ನು ಜಾರಿ ಮಾಡಿದ ನಂತರ ಭೂ ಸುಧಾರಣೆ ಮತ್ತು ನಗರ ಆಸ್ತಿ ಮಿತಿ ಜಾರಿಗೆ ತರಬೇಕೆಂದು, ಇಲ್ಲದಿದ್ದರೆ ಜನತೆಯಲ್ಲಿ ಅತೃಪ್ತಿ ಮೂಡಿ ಆಡಳಿತ ಕಾಂಗ್ರೆಸಿಗೆ ಧಕ್ಕೆ ಬರುವುದೆಂದು ಈ ಸಭೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒತ್ತಾಯಪಡಿಸುತ್ತದೆ.

ಲೆವಿ ಭತ್ತವನ್ನು ಕೊಳ್ಳುವಾಗ, ಸರ್ಕಾರ ಕಡಿಮೆ ದರವನ್ನು ನಿಗದಿ ಮಾಡಿದ್ದಾಗ್ಯೂ, ಭತ್ತವನ್ನು ಅಳಿಸಿಕೊಳ್ಳುವಾಗ ಚೀಲಕ್ಕೆ 1 ಕೆ. ಜಿ. ಮತ್ತು ಹಸಿ ಭತ್ತ ಎಂದು 1 ಕೆ ಜಿ ಭತ್ತ ಹೆಚ್ಚು ವಾರಡಿ ತೆಗೆದುಕೊಂಡು ರೈತರಿಗೆ ಘೋರವಾದ ಅನ್ಯಾಯ ಮಾಡುತ್ತಿರುವುದನ್ನು ಮೈಸೂರು ಸರ್ಕಾರ ಕೂಡಲೇ ನಿಲ್ಲಿಸದಿದ್ದರೆ ರೈತರ ಭಾರಿ ಚಳುವಳಿ ಆದೀತೆಂದು ಸಭೆಯ ಗಮನಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂಗೌಡರು ತಂದು, ತ್ವರಿತ ಪರಿಶೀಲಿಸಲ್ಪಟ್ಟು, ಸರ್ಕಾರ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಪಡಿಸಿತು.

ದೇಶದ ಆರ್ಥಿಕ ಪರಿಸ್ಥಿತಿ ತೊಂದರೆಯಲ್ಲಿರುವ ಈ ಸಂದರ್ಭದಲ್ಲಿ ವೇತನಗಳನ್ನು ತ್ಯಾಗಮಾಡಿ, ಸಭೆ ನಡೆಯುವಾಗ ಎರಡು ಹೊತ್ತು ಊಟ, ತಿಂಡಿ, ವಾಹನ ಹಾಗೂ ಪ್ರಯಾಣ ಭತ್ಯೆಗಳನ್ನು ಪಡೆದು ದೇಶಸೇವೆ ಮಾಡಬೇಕೆಂದು ಸಂಸತ್ ಮತ್ತು ವಿಧಾನ ಸಭೆ ಸದಸ್ಯರನ್ನು ಪ್ರಾರ್ಥಿಸುತ್ತದೆ.

ವುಡ್‌ಲಾಂಡ್ಸ್ 22 12 72 ರಿಂದ ಆಮೋಘ 2ನೇ ವಾರ

ಸೆವೆ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಬೆಳಗಿನ ಪ್ರದರ್ಶನ 10-30 ಕ್ಕೆ ವೀರಸಂಕಲ್ಪ

ಅಪೆರಾ 22 12 72 ರಿಂದ

ಆತ್ಯಮೋಘ ಹಿಂದಿ ಕಲರ್ ಚಿತ್ರ

ಗೂಡುಪುಟಾಣಿ

ಈಸ್ಟ್‌ಮನ್ ಕಲರ್ ತೆಲುಗು ಚಿತ್ರ

ನಿರ್ದೇಶನ : ಕೆ. ಲಕ್ಷ್ಮೀದೀಪಕ್

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ -
ಪೂರ್ಣ ನಿಶೇಧವಾಗಲಿ

Protect the Cow



Help The Gorakshana

— Humanitarian Propoganda Monthly....

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S Krishna Rao (Proprietor) at the Satvavadi Press, Chamaraja puram, Mysore 4

Contribute Liberally to the National Defence Fund